ಅನುಬಂಧ - 3

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮನೆಗಳಿಗೆ ಭಾಗ್ಯ ಜ್ಯೋತಿ ಯೋಜನೆಯಡಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಬಗ್ಗೆ ಇದುವರೆಗೆ ವಿದ್ಯುಚ್ಛಕ್ತಿ ನೀಡಿರುವುದರಲ್ಲಿ ತಾಲ್ಲೂಕುವಾರು ವಿವರ:

(ಜನವರಿ 1998ರ ಅಂತ್ಯದವರೆಗೆ)

ಕ್ರ.ಸಂ.	ತಾಲ್ಲೂಕು ಹೆಸರು	ಸಾಧನೆ	
		ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ
1.	ಬೆಳ್ತಂಡಿ	437	160
2.	ಬಂಟ್ವಾಳ	369	228
3.	ಕುಂದಾಪುರ	404	306
4.	ಕಾರ್ಕಳ	678	319
5.	ಮಂಗಳೂರು	628	219
6.	ಪುತ್ತೂರು	561	236
7.	ಸುಳ್ಯ	713	182
8.	ಉಡುಪಿ	603	446
	ಒಟ್ಟು	4393	2096

ವಕ್ಫ್ ಮಂಡಳಿಯಿಂದ ಹಣ ಬಿಡುಗಡೆ

264 (565) ಶ್ರೀ ಬಸವರಾಜ ಹೆಚ್.ಡಿ. (ವಿರಾಜಪೇಟೆ) : ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ

ಅ) ರಾಜ್ಯದಲ್ಲಿರುವ ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ ವಕ್ಫ್ ಮಂಡಳಿಯಿಂದ 1995-96, 1996-97 ಮತ್ತು 1997-98 ರ ಸಾಲಿನಲ್ಲಿ ಬಿಡುಗಡೆ ಮಾಡಿದ ಮೊತ್ತವೆಷ್ಟು (ವಿವರ ನೀಡುವುದು);

ಆ) ಈ ಹಣವನ್ನು ಯಾವ ಯಾವ ಬಾಬ್ತುಗಳಲ್ಲಿ ವಿನಿಯೋಗಿಸಲಾಗಿದೆ (ವಿವರ ಒದಗಿಸುವುದು)?

ಶ್ರೀ ಆರ್. ರೋಷನ್ ಬೇಗ್ (ವಕ್ಫ್ ಮತ್ತು ಗೃಹ ರಾಜ್ಯ ಸಚಿವರು) :

ಅ) ಗ್ರಾಂಟ್ - ಇನ್ -ಏಯ್ಡ್ ಕೋಡ್ ಪ್ರಕಾರ ಅನುದಾನವನ್ನು ವಿಧಾನ ಸಭಾ ಕ್ಷೇತ್ರದ ಆಧಾರ ಮಂಜೂರು ಮಾಡಲು ರಹ ಇರುವುದಿಲ್ಲ. ಆದರೆ ಈ ಅನುದಾನವನ್ನು ಜಿಲ್ಲೆವಾರು ಮಂಜೂರು ಮಾಡಲಾಗುತ್ತಿದೆ. ವಕ್ಫ್ ಮಂಡಲಿಯ ಬಿಡುಗಡೆ ಮಾಡಿದ ಮೊತ್ತದ, ಅನುದಾನದ ವರ್ಷವಾರು ವಿವರ ಈ ಕೆಳಕಂಡಂತಿದೆ:

ಕ್ರಮ ಸಂಖ್ಯೆ	ವರ್ಷ	ಸರ್ಕಾರದಿಂದ ಮಂಜೂರಾದ ಅನುದಾನ	ವಕ್ಫ್ ಮಂಡಳಿಯಿಂದ ಬಿಡುಗಡೆಯಾದ ಮೊತ್ತ
		ರೂ.	ರೂ.
1.	1995-96	2.00 ಕೋಟಿ	1,85,85,000
2.	1996-97	2.00 ಕೋಟಿ	1,30,02,500
3.	1997-98	1.50 ಕೋಟಿ	-

ಆ) ಈ ಅನುದಾನವನ್ನು ವಕ್ಫ್ ಸಂಸ್ಥೆಗಳು, ಅಂದರೆ, ಮಸೀದಿ, ದರ್ಗಾ, ಈದಗಾ, ಖಬರ್‌ಸ್ತಾನ (ಸ್ಮಶಾನ) ಮತ್ತು ಅಶೂರ್‌ಖಾನ, ಮುಂತಾದವುಗಳ ರಿಪೇರಿ, ಜೀರ್ಣೋದ್ಧಾರ ಮತ್ತು ಅಭಿವೃದ್ಧಿಗಾಗಿ ಮಂಜೂರು ಮಾಡಲಾಗುತ್ತಿದೆ.

ಮಂಚನ ಬೆಲೆ ಜಲಾಶಯ ಯೋಜನಾ ವಿಭಾಗದಲ್ಲಿ ಕೋಟಿ ರೂಪಾಯಿಗಳ ಅವ್ಯವಹಾರ

266 (609) ಶ್ರೀ ಹೆಚ್. ಸಿ. ಬಾಲಕೃಷ್ಣ (ಮಾಗಡಿ) : ಮಾನ್ಯ ಬೃಹತ್ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಮಂಚನಬೆಲೆ ಜಲಾಶಯ ಯೋಜನಾ ವಿಭಾಗದಲ್ಲಿ ಸುಮಾರು ಒಂದು ಕೋಟಿ ರೂಪಾಯಿಗಳ ಅವ್ಯವಹಾರದ ಕಡೆ ನಡೆದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ.

ಆ) ಆಡಿಟ್ ತನಿಖೆಯಿಂದ ಈಗಾಗಲೇ 50 ಲಕ್ಷ ರೂಪಾಯಿಗಳ ಅವ್ಯವಹಾರ ನಡೆದಿರುವುದು ಸಾಬೀತಾಗಿದ್ದು, ಉಳಿದ ಅವ್ಯವಹಾರದ ಬಗ್ಗೆ ತನಿಖೆ ನಡೆಸುತ್ತಿರುವುದು ನಿಜವೇ.

ಇ) ಈ ಯೋಜನಾ ವಿಭಾಗದಲ್ಲಿ ಸಿಮೆಂಟ್ ಕಬ್ಬಿಣವನ್ನು ಖಾಸಗಿಯವರಿಗೆ ಮಾರಿ ಕೊಂಡಿದ್ದು ಈ ಜವಾಬ್ದಾರಿ ಹೊತ್ತ ಸ್ಟೋರ್ ಕೀಪರ್ ಒಬ್ಬರು ಆತ್ಮಹತ್ಯೆ ಮಾಡಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಈ) ಈ ಅವ್ಯವಹಾರದಲ್ಲಿ ಯೋಜನಾ ವಿಭಾಗದ ಉನ್ನತ ಮಟ್ಟದ ಅಧಿಕಾರಿಗಳು ಶಾಮೀಲಾಗಿರುವುದು ಮೇಲ್ನೋಟಕ್ಕೆ ಸಾಬೀತಾಗಿದ್ದು ಇವರ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗುತ್ತದೆ.

ಉ) ಅವ್ಯವಹಾರದ ಪೂರ್ಣ ವಿವರ ನೀಡುವುದು?

ಶ್ರೀ ಕೆ. ಎನ್. ನಾಗೇಗೌಡ (ಬೃಹತ್ ನೀರಾವರಿ ಮಂತ್ರಿಗಳು) :

ಅ) ಮಂಚನಬೆಲೆ ಜಲಾಶಯ ಯೋಜನಾ ವಿಭಾಗದಲ್ಲಿ ಒಂದು ಕೋಟಿ ಅವ್ಯವಹಾರ ನಡೆದಿರುವುದಿಲ್ಲ. ಬದಲಾಗಿ ರೂ. 38 ಲಕ್ಷ ಮೊತ್ತದ ಸಾಮಾಗ್ರಿಗಳ ಕೊರತೆ ಕಂಡು ಬಂದಿರುತ್ತದೆ.

ಆ) ಇಲಾಖಾ ತನಿಖೆಯಿಂದ ಈಗಾಗಲೇ ರೂ. 38 ಲಕ್ಷ ಕೊರತೆಯ ಮೌಲ್ಯವನ್ನು ಪತ್ತೆ ಹಚ್ಚಿದ್ದು ಈ ಸಂಬಂಧ ಪ್ರಾಥಮಿಕ ವಿಚಾರಣೆಯು ಪ್ರಗತಿಯಲ್ಲಿದೆ.